154 ಹೆ6 ನಿ-330 - (31)
4RR
0707

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ. ಸಂಕನೂರ ಇವರು ನಿಯಮ 330 ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ**

ಶಾಲಾ ಶಿಕ್ಷಣ ಇಲಾಖೆಯಲ್ಲಿ 2016ರ ಪೂರ್ವದಲ್ಲಿ 1-7ನೇ ತರಗತಿಗಳಿಗೆ ಬೋಧಿಸಲು ನೇಮಕಗೊಂಡ ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ BA/ BSC ಹಾಗೂ DEd/ Bed ಪದವಿ ಹೊಂದಿದವರಿಗೆ 6 ರಿಂದ 8ನೇ ತರಗತಿಗಳಿಗೆ ಬೋಧಿಸಲು ಪದೋನ್ನತಿ (GPT) ನೀಡದೇ ಅನ್ಯಾಯ ಆಗಿರುವ ಕುರಿತು ಪ್ರಸ್ತಾಪಿಸುವುದು.

**ಉತ್ತರ**

1. ರಾಷ್ಟ್ರೀಯ ಶಿಕ್ಷಣ ಶಿಕ್ಷಕರ ಪರಿಷತ್ತು (NCTE) ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 5ನೇ ತರಗತಿ ಮತ್ತು 6 ರಿಂದ 8ನೇ ತರಗತಿಗಳಿಗೆ ಬೋಧಿಸುವ ಶಿಕ್ಷಕರಿಗೆ ಪ್ರತ್ಯೇಕ ವಿದ್ಯಾರ್ಹತೆಯನ್ನು ನಿಗದಿಪಡಿಸಿರುತ್ತದೆ. 1 ರಿಂದ 5ನೇ ತರಗತಿ ಬೋಧಿಸುವ ಶಿಕ್ಷಕರಿಗೆ ಪಿಯುಸಿ ಮತ್ತು ಟಿಸಿಹೆಚ್ / ಡಿ.ಇಡಿ ಮತ್ತು 6 ರಿಂದ 8ನೇ ತರಗತಿಗೆ ಬೋಧಿಸುವ ಶಿಕ್ಷಕರಿಗೆ ಪದವಿ ಮತ್ತು ಟಿಸಿಹೆಚ್ / ಡಿ.ಇಡಿ ವಿದ್ಯಾರ್ಹತೆಯನ್ನು ನಿಗದಿಪಡಿಸಿರುತ್ತದೆ.
2. ಆರ್‌ಟಿಇ ಕಾಯ್ದೆ 2009ರ ಕಲಂ 12(1) ರನ್ವಯ ಎನ್‌ಸಿಟಿಇ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿದ ಶಿಕ್ಷಕರನ್ನು ಶಾಲೆಗಳಿಗೆ ಒದಗಿಸುವುದು ಕಡ್ಡಾಯವಾಗಿರುತ್ತದೆ.
3. ಆರ್‌ಟಿಇ ಕಾಯ್ದೆ ಮತ್ತು ಎನ್‌ಸಿಟಿಇ ಮಾರ್ಗಸೂಚಿಯಂತೆ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು 2017ರಲ್ಲಿ ಹೊಸ ನಿಯಮಗಳನ್ನು ರಚಿಸಿ ಈ ಕೆಳಗಿನಂತೆ ವೃಂದಗಳನ್ನು ರಚಿಸಲಾಗಿರುತ್ತದೆ.

| ವೃಂದ | ಬೋಧಿಸುವ ತರಗತಿ | ನಿಗಧಿಪಡಿಸಿದ ವಿದ್ಯಾರ್ಹತೆ |
|---|---|---|
| ಪ್ರಾಥಮಿಕ ಶಾಲಾ ಶಿಕ್ಷಕರು | 1 ರಿಂದ 5 | ಪಿಯುಸಿ ಮತ್ತು ಟಿ.ಸಿ.ಹೆಚ್/ ಡಿ.ಇಡಿ |
| ಪದವೀಧರ ಪ್ರಾಥಮಿಕ ಶಿಕ್ಷಕರು | 6 ರಿಂದ 8 | ಪದವಿ ಮತ್ತು ಟಿ.ಸಿ.ಹೆಚ್/ ಡಿ.ಇಡಿ |

4. 2016ಕ್ಕಿಂತ ಪೂರ್ವದಲ್ಲಿ ಆ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಪಿ.ಯು.ಸಿ ಮತ್ತು ಟಿ.ಸಿ.ಹೆಚ್/ ಡಿ.ಇಡಿ ವಿದ್ಯಾರ್ಹತೆ ಆಧರಿಸಿ ನೇಮಕಗೊಂಡಿದ್ದ ಪ್ರಾಥಮಿಕ ಶಾಲಾ ಸಹ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರು(ಪಿಎಸ್‌ಟಿ) ವೃಂದದಲ್ಲಿರಿಸಲಾಗಿರುತ್ತದೆ.
5. 2016ರ ಪೂರ್ವದಲ್ಲಿ ಯಾವುದೇ ಶಿಕ್ಷಕರನ್ನು 6 ರಿಂದ 7/8 ತರಗತಿಗಳಿಗೆ ಮಾತ್ರ ಬೋಧಿಸಲು ನೇಮಕ ಮಾಡಿಕೊಂಡಿರುವುದಿಲ್ಲ.
6. 2017ರಲ್ಲಿ ರಚಿಸಲಾಗಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಭವಿಷ್ಯವರ್ತಿಯಾಗಿ ಜಾರಿಗೆ ಬರುವಂತೆ (With prospective effect) ಜಾರಿಗೊಳಿಸಿದ್ದು, ಪೂರ್ವಾನ್ವಯವಾಗಿ ಜಾರಿಗೊಳಿಸಿರುವುದಿಲ್ಲ.
7. 2016ಕ್ಕಿಂತ ಪೂರ್ವದಲ್ಲಿ ನೇಮಕಗೊಂಡಿರುವ ಶಿಕ್ಷಕರ ವೇತನ, ವಾರ್ಷಿಕ ವೇತನ ಬಡ್ತಿ ಒಳಗೊಂಡಂತೆ ಯಾವುದೇ ಸೇವಾ ಸೌಲಭ್ಯಗಳಲ್ಲಿ ಬದಲಾವಣೆ ಮಾಡಿರುವುದಿಲ್ಲ ಮತ್ತು ಯಾವುದೇ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಹಿಂಬಡ್ತಿಗೊಳಿಸಿರುವುದಿಲ್ಲ.
8. ಪಿಎಸ್‌ಟಿ ವೃಂದದಿಂದ ಜಿಪಿಟಿ ವೃಂದಕ್ಕೆ ಪ್ರಸ್ತುತ 33%ರಷ್ಟು ಹುದ್ದೆಗಳಿಗೆ ಪರೀಕ್ಷೆ ಮೂಲಕ ಮುಂಬಡ್ತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಪರೀಕ್ಷೆ ಮೂಲಕ ಮುಂಬಡ್ತಿ ನೀಡುವುದನ್ನು ವಿರೋಧಿಸಿ ಈವರೆಗೂ ಸದರಿ ಮುಂಬಡ್ತಿ ಅವಕಾಶವನ್ನು ಬಳಸಿಕೊಂಡಿರುವುದಿಲ್ಲ.

**ಸಂಖ್ಯೆ: ಇಪಿ 110 ಪಿಎಂಎ 2024**

**(ಎಸ್. ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು